# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆಗೆ ಸಂಬಂಧಿಸಿದಂತೆ ಹೆಚ್ಚುವರಿ ಮಾರ್ಗಸೂಚಿಗಳು.

**ಓದಲಾದ:**1. ಸರ್ಕಾರ ಆದೇಶ ಸಂಖ್ಯೆ:ಗ್ರಾಅಪ/270/ಗ್ರಾಪಂಅ/2021,ದಿನಾಂಕ: 27.07.2021.

2. ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯದ "ಸುಸ್ಥಿರ ಅಭಿವೃದ್ಧಿ ಗುರಿಗಳ ಸ್ಥಳೀಕರಣ ವರದಿ"ಯ ಅನ್ವಯ.
3. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಕಪಂರಾಅ/ಅಭಿವೃದ್ಧಿ/406/2022, ಬೆಂಗಳೂರು, ದಿನಾಂಕ:26.08.2022.
4. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಕಪಂರಾಅ/ಅಭಿವೃದ್ಧಿ/406/2022, ಬೆಂಗಳೂರು, ದಿನಾಂಕ:17.09.2022.

****

**ಪ್ರಸ್ತಾವನೆ:-**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕ್ರಮ ಸಂಖ್ಯೆ (1) ಮತ್ತು (2)ರಲ್ಲಿ ಗ್ರಾಮ ಪಂಚಾಯಿತಿ ಹಂತದಲ್ಲಿ ದೂರದೃಷ್ಟಿ ಯೋಜನೆಗೆ ಸಂಬಂಧಿಸಿದಂತೆ ಉಲ್ಲೇಖಿಸಲಾಗಿದೆ. ಮುಂದುವರೆದು, ಕ್ರಮ ಸಂಖ್ಯೆ(3) ಮತ್ತು (4)ರಲ್ಲಿ ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ ಸಿದ್ಧಪಡಿಸುವಿಕೆ ಕುರಿತಂತೆ, ಮಾರ್ಗಸೂಚಿ ಹಾಗೂ ಗ್ರಾಮ ಮಟ್ಟದ ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಯೋಜನಾ ಸಮಿತಿಗಳ ರಚನೆ ಮತ್ತು ಪಾತ್ರಗಳ ಕುರಿತಂತೆ ವಿವರಿಸಲಾಗಿರುತ್ತದೆ. ರಾಜ್ಯದ 31 ಜಿಲ್ಲೆಗಳ ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ಸದರಿ ಪ್ರಕ್ರಿಯೆಯನ್ನು ಆಧರಿಸಿ ಪ್ರಾಯೋಗಿಕವಾಗಿ ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸಲು ಕ್ರಮವಹಿಸಲಾಗಿದ್ದು ಅದರಲ್ಲಿ ಕಂಡುಬಂದ ಅಂಶಗಳ ಹಿನ್ನಲೆಯಲ್ಲಿ ಇಡೀ ಪ್ರಕ್ರಿಯೆಯಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡುವ ಅವಶ್ಯಕತೆ ಕಂಡುಬಂದಿರುತ್ತದೆ.

ಗ್ರಾಮ ಪಂಚಾಯಿತಿ ಹಂತದಲ್ಲಿ ದೂರದೃಷ್ಟಿ ಯೋಜನೆ ಸಿದ್ಧಪಡಿಸುವ ಪ್ರಕ್ರಿಯೆಯನ್ನು 2022ರ ಸೆಪ್ಟೆಂಬರ್ ಮೂರನೇ ವಾರದಿಂದ ಪ್ರಾರಂಭಿಸಲಾಗಿರುತ್ತದೆ. ಈ ದೂರದೃಷ್ಟಿ ಯೋಜನೆಯನ್ನು ಮುಂದಿನ ಐದು ವರ್ಷಗಳ ಅವಧಿಗೆ ಸಂಬಂಧಿಸಿದಂತೆ ಸಿದ್ಧಪಡಿಸಲಾಗುತ್ತಿದ್ದು, ಈಗಾಗಲೇ 2022-23ನೇ ಸಾಲಿನ ವಾರ್ಷಿಕ ಕ್ರಿಯಾಯೋಜನೆಯನ್ನು ಸಿದ್ಧಪಡಿಸಲಾಗಿರುವುದರಿಂದ 2023-24ನೇ ಸಾಲಿನ ವಾರ್ಷಿಕ ಕ್ರಿಯಾಯೋಜನೆಗೆ ಚಾಲನೆ ನೀಡುವ ಅವಶ್ಯಕತೆ ಇದ್ದು ಹಾಗೂ ವಿಶೇಷ ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ಗ್ರಾಮ ಪಂಚಾಯಿತಿ ಹಂತದಲ್ಲಿ ಸೇರ್ಪಡೆ / ಮಾರ್ಪಾಡು ಮಾಡುವ ಅವಶ್ಯಕತೆಯನ್ನು ಮನಗಾಣಲಾಗಿದೆ. ಅದಕ್ಕಾಗಿ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕಪಂರಾಅ/ಅಭಿವೃದ್ಧಿ/406/2022,**
**ಬೆಂಗಳೂರು, ದಿನಾಂಕ:27.10.2022**

ಗ್ರಾಮ ಪಂಚಾಯಿತಿ ಹಂತದಲ್ಲಿ ದೂರದೃಷ್ಟಿ ಯೋಜನೆ ಸಿದ್ಧಪಡಿಸುವ ಪ್ರಕ್ರಿಯೆಯನ್ನು 2022ರ ಸೆಪ್ಟೆಂಬರ್ ಮೂರನೇ ವಾರದಿಂದ ಪ್ರಾರಂಭಿಸಲಾಗಿದ್ದು, ದೂರದೃಷ್ಟಿ ಯೋಜನೆಯನ್ನು ಮುಂದಿನ ಐದು ವರ್ಷಗಳ ಅವಧಿಗೆ ಸಂಬಂಧಿಸಿದಂತೆ ಸಿದ್ಧಪಡಿಸುವಾಗ ಅಳವಡಿಸಿರುವ ಪ್ರಕ್ರಿಯೆಯಲ್ಲಿ ಈ ಕೆಳಕಂಡಂತೆ ಮಾರ್ಪಾಡು ಮಾಡಿ ಆದೇಶಿಸಿದೆ.

- ಕೇಂದ್ರೀಕೃತ ಗುಂಪು ಚರ್ಚೆಯನ್ನು ಪ್ರತಿ ಗ್ರಾಮದಲ್ಲಿ ಎರಡು ತಂಡದಲ್ಲಿ ಆಯೋಜಿಸುವುದು. ಮೊದಲನೇ ತಂಡದಲ್ಲಿ ಆರೋಗ್ಯ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಷಯಗಳಿಗೆ ಸಂಬಂಧಿಸಿದಂತೆ ಗುಂಪು ಚರ್ಚೆಯನ್ನು ಆಯೋಜಿಸುವುದು. ಎರಡನೇ ತಂಡದಲ್ಲಿ ಬಡತನ ಮುಕ್ತ, ಜೀವನೋಪಾಯ, ಕೌಶಲ್ಯಾಭಿವೃದ್ಧಿ, ಪರಿಸರ ಮತ್ತು ನೈಸರ್ಗಿಕ ಸಂಪನ್ಮೂಲಗಳು, ಸಾಮಾಜಿಕ ನ್ಯಾಯ, ಸಾಮಾಜಿಕ ಸುರಕ್ಷತೆ ಮತ್ತು ಮೂಲಸೌಕರ್ಯ ಸ್ವಾವಲಂಬಿ ಗ್ರಾಮ ಪಂಚಾಯಿತಿ ವಿಷಯಗಳ ಬಗ್ಗೆ ಗುಂಪು ಚರ್ಚೆಯನ್ನು ಆಯೋಜಿಸುವುದು.
- ಗ್ರಾಮವಾರು ಆಯೋಜಿಸಲಾಗುವ ಗುಂಪು ಚರ್ಚೆಗಳಲ್ಲಿ ಸಂಬಂಧಪಟ್ಟ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಜನವಸತಿ ಪ್ರದೇಶಗಳು/ತಾಂಡ/ಹಟ್ಟಿ ಇತ್ಯಾದಿಗಳಿಂದ ಕಡ್ಡಾಯವಾಗಿ ಸಮುದಾಯದ ಪ್ರತಿನಿಧಿಗಳು ಭಾಗವಹಿಸಿರುವುದನ್ನು ಖಚಿತಪಡಿಸಿಕೊಳ್ಳುವುದು.

- ಗುಂಪು ಚರ್ಚೆಗಳನ್ನು ಆಯೋಜಿಸುವಾಗ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು, ಸಾಮಾನ್ಯ ವರ್ಗ, ರೈತರು, ಹಿರಿಯ ನಾಗರೀಕರು,ಯುವಕ/ಯುವತಿಯರು, ವಿಧವೆಯರು, ಮಹಿಳೆಯರು, ಮಕ್ಕಳು ಮತ್ತು ವಿಶೇಷ ಚೇತನರು, ಲಿಂಗತ್ವಅಲ್ಪಸಂಖ್ಯಾತರು ಭಾಗವಹಿಸಿರುವುದನ್ನು ಖಚಿತಪಡಿಸಿಕೊಳ್ಳುವುದು.

- ಗ್ರಾಮದಲ್ಲಿ ಆಯೋಜಿಸುವ ಎರಡೂ ಗುಂಪುಚರ್ಚೆಗಳನ್ನು ಹೊರತು ಪಡಿಸಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಜನವಸತಿ ಪ್ರದೇಶಗಳನ್ನು/ತಾಂಡ/ಹಾಡಿ/ಹಟ್ಟಿಗಳನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಗುರುತಿಸಿ ಅತೀ ದೊಡ್ಡ ಜನಸಂಖ್ಯೆಯುಳ್ಳ ಜನವಸತಿ ಪ್ರದೇಶ/ತಾಂಡ/ಹಾಡಿ/ಹಟ್ಟಿಗಳಲ್ಲಿ ಎಲ್ಲಾ ಎಂಟು ವಲಯಗಳನ್ನು ಒಗ್ಗೂಡಿಸಿ ಒಂದು ಗುಂಪು ಚರ್ಚೆಯನ್ನು ಆಯೋಜಿಸುವುದು.

ಗ್ರಾಮ ಪಂಚಾಯಿತಿ ಹಂತದಲ್ಲಿ ದೂರದೃಷ್ಟಿ ಯೋಜನೆ ಸಿದ್ಧಪಡಿಸುವ ಪ್ರಕ್ರಿಯೆಯನ್ನು 2022ರ ಸೆಪ್ಟಂಬರ್ ಮೂರನೇ ವಾರದಿಂದ ಪ್ರಾರಂಭಿಸಲಾಗಿರುತ್ತದೆ. ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯದ ಆದೇಶದನ್ವಯ ಕಳೆದ ವರ್ಷದ ಅಕ್ಟೋಬರ್ 02 ರಿಂದ ಪ್ರಸಕ್ತ ಸಾಲಿನ ಜನವರಿ 31 ರೊಳಗೆ ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿಯು 2022-23ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಈಗಾಗಲೇ ಸಿದ್ಧಪಡಿಸಿರುತ್ತದೆ. ಈ ಹಿನ್ನಲೆಯಲ್ಲಿ ದೂರದೃಷ್ಟಿ ಯೋಜನೆಯನ್ನು 2023-24ನೇ ಸಾಲಿನಿಂದ 2027-28ನೇ ಸಾಲಿನ ವರೆಗೆ ಸಿದ್ಧಪಡಿಸಲು ಆದೇಶಿಸಿದೆ. ಇದಕ್ಕೆ ಪೂರಕವಾಗಿ 2023-24ನೇ ಸಾಲಿನ ಕ್ರಿಯಾ ಯೋಜನೆಯನ್ನು ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯದ ಆದೇಶದನ್ವಯ ಜನವರಿ 31, 2023ರೊಳಗೆ ಸಿದ್ಧಪಡಿಸಲು ಆದೇಶಿಸಿದೆ.

**ದೂರದೃಷ್ಟಿ ಯೋಜನೆ ಸೇರ್ಪಡೆ / ಮಾರ್ಪಾಡು**

ಗ್ರಾಮ ಪಂಚಾಯಿತಿಗಳು ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸಿ ಅಂತಿಮಗೊಳಿಸಿದ ನಂತರ ವಿಶೇಷ/ಅನಿವಾರ್ಯ ಸಂದರ್ಭಗಳಲ್ಲಿ ದೂರದೃಷ್ಟಿ ಯೋಜನೆಯ ಗುರಿಗಳು/ಅಂಕಿ-ಅಂಶಗಳಲ್ಲಿ ಸೇರ್ಪಡೆ ಅಥವಾ ಮಾರ್ಪಾಡು ಮಾಡುವ ಅವಶ್ಯಕತೆಗಳು ಕಂಡುಬಂದಲ್ಲಿ ಈ ಕೆಳಕಂಡಂತೆ ಕ್ರಮವಹಿಸಲು ಆದೇಶಿಸಿದೆ.

ಅ) ವಿಶೇಷ ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ಗ್ರಾಮ ಪಂಚಾಯಿತಿ ಹಂತದಲ್ಲಿ ಸೇರ್ಪಡೆ/ಮಾರ್ಪಾಡು ಮಾಡಲು ಈ ಕೆಳಕಂಡ ಪ್ರಕ್ರಿಯೆಗಳನ್ನು ನಿರ್ದಿಷ್ಟಪಡಿಸಲಾಗಿದೆ.

- ಅತಿವೃಷ್ಟಿ, ಅನಾವೃಷ್ಟಿ ಮುಂತಾದ ನೈಸರ್ಗಿಕ ವಿಕೋಪಗಳು ಸಂಭವಿಸಿ ದೂರದೃಷ್ಟಿ ಯೋಜನೆಗೆ ಅತ್ಯವಶ್ಯವಿದ್ದಾಗ ಸೇರ್ಪಡೆ / ಮಾರ್ಪಾಡುಗಳನ್ನು ಕೈಗೊಳ್ಳಬಹುದಾಗಿದೆ.

ಬ) ದೂರದೃಷ್ಟಿ ಯೋಜನೆ ಮಾರ್ಪಾಡು ಮತ್ತು ಸೇರ್ಪಡೆ ಮಾಡುವ ಸಂದರ್ಭಗಳಲ್ಲಿ ಈ ಕೆಳಕಂಡ ಪ್ರಕ್ರಿಯೆಯನ್ನು ಅಳವಡಿಸುವುದು.

- ದೂರದೃಷ್ಟಿ ಯೋಜನೆ ಮಾರ್ಪಾಡು ಮತ್ತು ಸೇರ್ಪಡೆ ವಿಷಯದ ಅಗತ್ಯತೆಯನ್ನು ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಅನುಮೋದನೆ ಪಡೆಯುವುದು.
- ದೂರದೃಷ್ಟಿ ಯೋಜನೆಯ ಗುರಿಗಳ ಮಾರ್ಪಾಡು ಮತ್ತು ಸೇರ್ಪಡೆಯ ವಿವರಗಳನ್ನು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆ ಪಡೆದು ನಂತರ ಬದಲಾವಣೆಗಳನ್ನು ಪಂಚತಂತ್ರ 2.0 ತಂತ್ರಾಂಶದಲ್ಲಿ ಅಳವಡಿಸುವುದು.
- ಈ ತೀರ್ಮಾನಗಳನ್ನು ನಂತರ ನಡೆಯುವ ಮೊದಲ ಗ್ರಾಮ ಸಭೆಯಲ್ಲಿ ಮಂಡಿಸಿ ಘಟನೋತ್ತರ ಅನುಮೋದನೆ ಪಡೆಯುವುದು.

**ದೂರದೃಷ್ಟಿ ಯೋಜನೆ – ಅಂಕಿ ಅಂಶಗಳ ವಾರ್ಷಿಕ ಪ್ರಗತಿ ಅಳವಡಿಸುವಿಕೆ.**

- ಪ್ರತಿ ವರ್ಷ ಮೇ ತಿಂಗಳಲ್ಲಿ ಹಿಂದಿನ ವರ್ಷದ ಭೌತಿಕ ಪ್ರಗತಿ ಮತ್ತು ಸಾಧನೆಗಳ ಅಂಕಿ-ಅಂಶಗಳ ಆಧಾರದ ಮೇಲೆ ಗುರಿಗಳನ್ನು ಮಾರ್ಪಾಡು ಮಾಡಬೇಕಾಗಿದೆ.
- ಪ್ರತಿ ವರ್ಷದ ಏಪ್ರಿಲ್-ಮೇ ತಿಂಗಳಲ್ಲಿ ವಿವಿಧ ಇಲಾಖೆಗಳ ಭೌತಿಕ ಪ್ರಗತಿ ಮತ್ತು ಸಾಧನೆಯ ಅಂಕಿ-ಅಂಶಗಳು ಲಭ್ಯವಾದ ನಂತರ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ

ಹಾಗೂ ಗ್ರಾಮಪಂಚಾಯಿತಿ ಸಭೆಯ ಅನುಮೋದನೆ ಪಡೆದು ಪಂಚತಂತ್ರ 2.0 ತಂತ್ರಾಂಶದಲ್ಲಿ ಜೂನ್ ಅಂತ್ಯದೊಳಗೆ ಅಳವಡಿಸಲು ಕ್ರಮವಹಿಸುವುದು.

**ದೂರದೃಷ್ಟಿ ಯೋಜನೆ ಕಾಲಮಿತಿ:**

| ಕ್ರ ಸಂ | ದೂರದೃಷ್ಟಿ ಯೋಜನೆ ಚಟುವಟಿಕೆಗಳು | ಕಾಲಮಿತಿ | ಜವಾಬ್ದಾರಿ |
|---|---|---|---|
| 1 | ದೂರದೃಷ್ಟಿ ಯೋಜನ ತರಬೇತಿ ಕಾರ್ಯಕ್ರಮಗಳು | ಸೆಪ್ಟಂಬರ್ 21, 2022ರಿಂದ ನವೆಂಬರ್ 15,2022 | ಅ.ನ.ಸಾ.ರಾ.ಗ್ರಾ.ಪಂ.ರಾ. ಸಂಸ್ಥೆ, ಮೈಸೂರು |
| 2 | ಗ್ರಾಮ ಯೋಜನೆ ಸಮಿತಿ ಮತ್ತು ಗ್ರಾಮ ಪಂಚಾಯಿತಿ ಯೋಜನಾ ಸಮಿತಿಗಳ ರಚನೆ | ಅಕ್ಟೋಬರ್ 31, 2022 | ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾ.ಪಂ |
| 3 | ದ್ವಿತೀಯ ದತ್ತಾಂಶಗಳು / ಅಂಕಿ-ಅಂಶಗಳ ಸಂಗ್ರಹಣೆ, ಅಡ್ಡ ನಡಿಗೆ, ಸಹಭಾಗಿ ಗ್ರಾಮೀಣ ಪರಾಮರ್ಶೆ ಹಾಗೂ ಕೇಂದ್ರೀಕೃತ ಗುಂಪು ಚರ್ಚೆ, | ನವೆಂಬರ್ 1, 2022 ರಿಂದ ನವೆಂಬರ್ 20, 2022 | ಗ್ರಾಮ ಪಂಚಾಯತ್ |
| 4 | ಜನವಸತಿ ಸಭೆ ಮತ್ತು ವಾರ್ಡ್ ಸಭೆಗಳ ಆಯೋಜನೆ, ವಾಸ್ತವ ಸ್ಥಿತಿಯ ವಿಶ್ಲೇಷಣೆ ಮೂಲಕ ಕರಡು ದೂರದೃಷ್ಟಿ ಯೋಜನೆ ತಯಾರಿ | ನವೆಂಬರ್ 21, 2022 ರಿಂದ ನವೆಂಬರ್ 30, 2022 | ಗ್ರಾಮ ಪಂಚಾಯತ್ |
| 5 | ಗ್ರಾಮ ಪಂಚಾಯಿತಿ ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಯ ಸಭೆ ಮತ್ತು ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆ | ಡಿಸೆಂಬರ್ 05 2022ರೊಳಗೆ | ಗ್ರಾಮ ಪಂಚಾಯತ್ |
| 6 | ಗ್ರಾಮ ಸಭೆಗಳ ಆಯೋಜನೆ ಮತ್ತು ಯೋಜನೆಗೆ ಅನುಮೋದನೆ. | ಡಿಸೆಂಬರ್ 06, 2022 ರಿಂದ ಡಿಸೆಂಬರ್ 15 2022 | ಗ್ರಾಮ ಪಂಚಾಯತ್ |
| 7 | ಪಂಚತಂತ್ರ 2.0 ತಂತ್ರಾಂಶದಲ್ಲಿ ದೂರದೃಷ್ಟಿ ಯೋಜನೆ ಅಳವಡಿಕೆ | ಡಿಸೆಂಬರ್ 20, 2022 | ಗ್ರಾಮ ಪಂಚಾಯತ್ |

ಉಲ್ಲೇಖ (3)ರಲ್ಲಿ ಸರ್ಕಾರವು ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ ತಯಾರಿಕೆ ಕುರಿತು ನೀಡಿರುವ ಇತರೆ ಪ್ರಕ್ರಿಯೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಮೇಲ್ಕಂಡ ಮಾರ್ಪಾಡುಗಳನ್ನು ಉಲ್ಲೇಖಿತ ಆದೇಶದಲ್ಲಿ ಅಳವಡಿಸಿಕೊಂಡು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳು ದೂರದೃಷ್ಟಿ ಯೋಜನೆಗಳನ್ನು ಸಿದ್ಧಪಡಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಲ್.ಕೆ.ಅತೀಕ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬೆಂಗಳೂರು.

**ರವರಿಗೆ,**

1. ಎಲ್ಲಾ ಜಿಲ್ಲೆಗಳ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನೋಡಲ್ ಅಧಿಕಾರಿಗಳಿಗೆ ಮೇಲ್ವಿಚಾರಣೆ ಮತ್ತು ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

3. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು. (ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
4. ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು. (ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)

**ಪ್ರತಿಯನ್ನು:**

1. ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ.
2. ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
4. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು (ಪಂ.ರಾ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
5. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಇವರ ಆಪ್ತ ಸಹಾಯಕರು.
6. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಬೆಂಗಳೂರು
7. ನಿರ್ದೇಶಕರು, ಇ-ಆಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
8. ನಿರ್ದೇಶಕರು, , ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು.
9. ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ / ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
10. ಕಛೇರಿ ಪ್ರತಿ.